**ಅಸಲು ದಾವಾ ನಂಃ 117/2022**

**ಪಿ.ಡಬ್ಲ್ಯೂಃ 1,**

ದಿನಾಂಕ :**13-01-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟಿ ಸವಾಲು :- ಶ್ರೀ.ಬಿ.ಎಸ್. ಬಿ. ಪ್ರತಿವಾದಿ ಪರ ವಕೀಲರಿಂದ :

3 ನೇ ಪ್ರತಿವಾದಿ ನನ್ನ ಅಳಿಯ ಅಂದರೆ ನನ್ನ ಮಗಳನ್ನು ಅವರಿಗೆ ಕೊಟ್ಟಿದ್ದೇವೆ. ಅವರು ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. 3 ನೇ ಪ್ರತಿವಾದಿ ಮದುವೆ ಆಗಿ 10 ವರ್ಷ ಆಗಿವೆ. ಸ.ನ. 811/2 ರ ಆಸ್ತಿ ನನ್ನ ಮಗಳನ್ನು 3 ನೇ ಪ್ರತಿವಾದಿಗೆ ಕೊಡುವಕ್ಕಿಂತ ಮುಂಚೆಯೇ ಅವರಿಗೆ ಹೆಸರಿನಲ್ಲಿತ್ತು ಏನು ನನಗೆ ಗೊತ್ತಿಲ್ಲಾ. ನಮ್ಮ ತಾಯಿ 3 ನೇ ಪ್ರತಿವಾದಿ ಹೆಸರಿನಲ್ಲಿ ಸ.ನ. 811/2 ಖರಿದಿಸಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹೆಸರಿನಲ್ಲಿ ನಮ್ಮ ತಾಯಿ ಯಾವ ಸ.ನ. ಖರಿದಿಸಿದ್ದಾರೆಂದು ನನಗೆ ಗೊತ್ತಿಲ್ಲಾ, ಯಾವ ವರ್ಷದಲ್ಲಿ, ಎಷ್ಟಕ್ಕೆ ಯಾವ ಸ.ನ. ಅಂತಾ ಗೊತ್ತಿಲ್ಲಾ. 3 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಖರಿದಿಸಿದ ನಂತರ ಅವರೇ ಸ್ವಾಧೀನ ಹೊಂದಿ ಅವರೇ ಬೆಳೆ ಬೆಳೆಯುತ್ತಿದ್ದಾರೆಂದರೆ ಗೊತ್ತಿಲ್ಲಾ. ಸದರಿ ಆಸ್ತಿಯನ್ನು 3 ನೇ ಪ್ರತಿವಾದಿ ಖರಿದಿಸಿದ ನಂತರ ಅವರ ಹೆಸರಿನಲ್ಲಿ ಪಹಣಿ ಇದ್ದು ಅವರೇ ಮಾಲಿಕ ಮತ್ತು ಸ್ವಾಧೀನ ಅನುಭವ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ . ನಾನು ಮತ್ತು ಪ್ರತಿವಾದಿಯರು ಎಲ್ಲರೂ ಜಂಟಿಯಾಗಿ ಸ್ವಾಧೀನ ಅನುಭವ ಮಾಡಿಕೊಂಡು ಬರುತ್ತಿದ್ದೆವೆ ಎಂದು ಸುಳ್ಳ ಸಾಕ್ಷಿ ನುಡಿಯುತ್ತಿದ್ದು, ಪ್ರತಿವಾದಿಯು ತಾವು ಖರಿದಿಸಿದ ಆಸ್ತಿಯನ್ನು ಅವರೇ ಸ್ವಾಧೀನ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ .

ಸ.ನ. 811/3 ರ 4.36 ಎಕರೆ ಜಮೀನನ್ನು ನಮ್ಮ ತಾಯಿಯವರು 2 ನೇ ಪ್ರತಿವಾದಿ ಹೆಸರಿನಲ್ಲಿ ಖರಿದಿಸಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹೆಸರಿನಲ್ಲಿ ಖರಿದಿಸಿದ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತಿಲ್ಲಾ, ಎಷ್ಟು ಎಕರೆ ಯಾರಿಂದ ಎಂದು ಗೊತ್ತಿಲ್ಲಾ. 2 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲಾ. ನಮ್ಮ ತಾಯಿಯವರು 2 ನೇ ಪ್ರತಿವಾದಿ ಹೆಸರಿನಲ್ಲಿ ಖರಿದಿಸಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿ ಜೀವಂತ ಇದ್ದಾಗ 1 ನೇ ಪ್ರತಿವಾದಿಗೆ 5.20 ಎಕರೆ, 2 ನೇ ಪ್ರತಿವಾದಿ 5.20 ಎಕರೆ ಮತ್ತು ನನಗೆ 3.17 ಎಕರೆ ಮೌಖಿಕವಾಗಿ

ಅಸಲು ದಾವಾ ನಂಃ **117/2022**
**ಪಿ.ಡಬ್ಲ್ಯೂಃ 1,**

ಪಾಲು ಮಾಡಿಕೊಟ್ಟಿದ್ದಾರೆ ಸಾಕ್ಷಿ ನನಗೆ ಪಾಲು ಕೊಟ್ಟಿಲ್ಲಾ ಎಂದು ನುಡಿಯುತ್ತಾರೆ. ಸದರಿ ಮೌಖಿಕ ಪಾಲ ವಿಭಾಗ ಪ್ರಕಾರ ನನ್ನ ಹೆಸರಿನಲ್ಲಿ 3.17 ಎಕರೆ ಪಹಣಿ ಬರುತ್ತಿದೆ ಎಂದರೆ ಗೊತ್ತಿಲ್ಲಾ. 1 ಮತ್ತು 2 ಪ್ರತಿವಾದಿ ತಾವು ಸ್ವಂತ ಗಳಿಸಿದ ಆಸ್ತಿ ಬಿಟ್ಟು ನಮ್ಮ ತಾಯಿಯು 1 ನೇ ಪ್ರತಿವಾದಿಗೆ 5.20 ಎಕರೆ, 2 ನೇ ಪ್ರತಿವಾದಿ 5.20 ಎಕರೆ ಮತ್ತು ನನಗೆ 3.17 ಎಕರೆ ಮೌಖಿಕವಾಗಿ ಪಾಲು ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲಾ. ಸ.ನ. 125 ರ 3.17 ಎಕರೆ ನನ್ನ ಪಾಲಿಗೆ ಬಂದಿದ್ದು ಅದನ್ನು ನಾನೇ ವ್ಯವಸಾಯ ಮಾಡಿ ಪ್ರತಿ ವರ್ಷ ಅದರಿಂದ ಬೆಳೆಯನ್ನು ತೆಗೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನ .125 ನನ್ನ ಹಸರಿಗೆ ಪಹಣಿ ಇದೆ ಎಂದು ಈ ದಾವೆ ಸಲ್ಲಿಸಿದ ನಂತರ ಗೊತ್ತಾಯಿತು. ಸ.ನ. 125 ಇದು ಬಿಳು ಬಿದ್ದಿದಿಯಾ ಅಥವಾ ಯಾರು ಸಾಗುವಳಿ ಮಾಡುತ್ತಿದ್ದಾರೆಂದು ಗೊತ್ತಿಲ್ಲಾ. ನಮ್ಮ ತಾಯಿ ಜೀವಂತ ಇದ್ದಾಗ ಮೌಖಿಕ ಪಾಲು ವಿಭಾಗ ಮಾಡಿದ್ದು, ಅವರ ತೀರಿ ಹೋದ ನಂತರ ಪ್ರತಿವಾದಿಯರು ಸ್ವಂತ ಗಳಿಸಿದ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಖರಿದಿಸಿದ ಆಸ್ತಿಯಲ್ಲಿ ಅವರು ಹೆಸರು ಪಹಣಿಯಲ್ಲಿದ್ದು ಅವರೇ ಸ್ವಾಧೀನ ಇದ್ದು ಮತ್ತು ನನ್ನ ಹೆಸರಿಗೆ ಇದ್ದ ಸ.ನ. 125 ನಾನೇ ಸ್ವಾಧೀನ ಇದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ದುರದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮತ್ತು ನನಗೆ ಸಂಬಂಧ ಇಲ್ಲಾ ಎಂದರೆ ಸಾಕ್ಷಿ 3 ನೇ ಪ್ರತಿವಾದಿ ಹೆಸರಿನಲ್ಲಿರುವ ಆಸ್ತಿಯು ನಮ್ಮ ತಾಯಿಯವರು ಖರಿದಿಸಿದ್ದಾರೆಂದು ನುಡಿಯುತ್ತಾರೆ. ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**